ಅಧ್ಯಕ್ಷರು : ಮುಂದಿನ ಪ್ರಶ್ನೆಗೆ ಮಾನ್ಯ ಸುಧಾಕರ್‌ರವರೇ ಉತ್ತರ ಹೇಳುತ್ತಾರೆ. ಈಗಾಗಲೇ ಅರ್ಧ ಉತ್ತರ ತಾವೇ ಹೇಳಿರುವುದರಿಂದ, ಉಳಿದ ಉತ್ತರವನ್ನೂ ಸಹ ತಾವೇ ಹೇಳಿ ಮುಗಿಸಿ.

(ಗೊಂದಲ)

Sri QAMARUL ISLAM : Many borewells are not in working condition.

(ಗೊಂದಲ)

ಶ್ರೀ ಗೋವಿಂದ ಎಂ.ಕಾರಜೋಳ : ನಿಮಗೆ ಅನುಕೂಲವಾಗುವ ರೀತಿಯಲ್ಲೇ ಉತ್ತರ ಹೇಳುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ.

ಅಧ್ಯಕ್ಷರು : ಬೇಗ ಉತ್ತರ ಹೇಳಿ ಮುಗಿಸಿ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಗಂಗಾ ಕಲ್ಯಾಣ ಯೋಜನೆಯನ್ನು ಮೊದಲು SC/ST Corporation ವತಿಯಿಂದ ಮಾತ್ರ ಅನುಷ್ಠಾನಗೊಳಿಸುತ್ತಿದ್ದೆವು. ಈಗ ನನ್ನ ಸಣ್ಣ ನೀರಾವರಿ ಇಲಾಖೆಯಿಂದಲೂ ಸಹ ಅನುಷ್ಠಾನಗೊಳಿಸಲು ಪ್ರಾರಂಭ ಮಾಡಿದ್ದೇವೆ. ಎಲ್ಲಿ ಹೆಚ್ಚಿನದಾಗಿ ತಮಗೆ ಆಗಬೇಕಾಗಿದೆಯೋ, ಆ ಬಗ್ಗೆ ನನಗೆ ಪಟ್ಟಿ ಕಳುಹಿಸಿಕೊಡಿ. ಅದು ಯಾವ ದೊಡ್ಡ ಕೆಲಸ? ಅದನ್ನು ನಾನೇ ಮಾಡಿಕೊಡುತ್ತೇನೆ.

ಶ್ರೀ ಖಮರಲ್ ಇಸ್ಲಾಂ : ಮಾನ್ಯ ಅಧ್ಯಕ್ಷರೆ,.....

ಅಧ್ಯಕ್ಷರು : ನಾನು ಮುಂದಿನ ಪ್ರಶ್ನೆಗೆ ಹೋಗಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ.

Sri QAMARUL ISLAM : Drilling of borewells have been deayed. What are you going to do?

ಶ್ರೀ ಗೋವಿಂದ ಎಂ. ಕಾರಜೋಳ : ಅದನ್ನು ಮಾಡಿಕೊಡುತ್ತೇವೆ.

ಸಮಾಜ ಕಲ್ಯಾಣ ಇಲಾಖೆಯಲ್ಲಿ ವಸತಿ ನಿಲಯಗಳು

111 (1298) ಶ್ರೀ ಸುಭಾಷ. ಆರ್. ಗುತ್ತೇದಾರ್ (ಆಳಂದ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿರುವ ವಸತಿ ನಿಲಯಗಳ ಸಂಖ್ಯೆ ಎಷ್ಟು;

ಆ) ಅವುಗಳಲ್ಲಿ ಎಷ್ಟು ವಸತಿ ನಿಲಯಗಳು ಸ್ವಂತ ಕಟ್ಟಡವನ್ನು ಹೊಂದಿವೆ;

ಇ) ಖಾಸಗಿ ಕಟ್ಟಡಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಸತಿ ನಿಲಯಗಳ ಸಂಖ್ಯೆ ಎಷ್ಟು (ಪೂರ್ಣ ಮಾಹಿತಿ ನೀಡುವುದು);

ಈ) ಹಾಗಿದ್ದಲ್ಲಿ, ಖಾಸಗಿ ಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬಾಡಿಗೆಯ ಮೊತ್ತ ಎಷ್ಟು (ವಿವರಗಳನ್ನು ನೀಡುವುದು);

ಉ) ವಸತಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು (ಪೂರ್ಣ ಮಾಹಿತಿ ನೀಡುವುದು);

ಊ) ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ಮೊತ್ತ ಎಷ್ಟು?

ಶ್ರೀ ಡಿ ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ – 09

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ – 01

ಒಟ್ಟು – 10

ಆ)

	ಸ್ವಂತ ಕಟ್ಟಡ	ಬಾಡಿಗೆ ಕಟ್ಟಡ
ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ	08	01
ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ	–	01
ಒಟ್ಟು	**08**	**02**

ಇ) ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಮುದ್ದಡಗ (ಅಳಂದ ತಾಲ್ಲೂಕು) ಮತ್ತು ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಅಳಂದ ಇವು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ.

ಈ)

- ಸರ್ಕಾರಿ ಬಾಲಕರ ವಸತಿ ನಿಲಯ, ಮದ್ದಡಗ, ಅಳಂದ ತಾಲ್ಲೂಕು ತಿಂಗಳಿಗೆ ರೂ.5000.00
- ಸರ್ಕಾರಿ ಬಾಲಕಿಯರ ವಸತಿ ನಿಲಯ, ಅಳಂದ ತಿಂಗಳಿಗೆ ರೂ.4200.00

ಉ) ಒಂದು ವಿದ್ಯಾರ್ಥಿನಿಲಯದ ಕಟ್ಟಡ ಪೂರ್ಣಗೊಳ್ಳುವ ಹಂತದಲ್ಲಿದ್ದು ಇನ್ನೊಂದು ವಿದ್ಯಾರ್ಥಿನಿಲಯದ ಕಟ್ಟಡ ವಿವಾದದಿಂದಾಗಿ ಸದ್ಯಕ್ಕೆ ಸ್ಥಗಿತಗೊಂಡಿದೆ.

ಊ) 2008–09ನೇ ಸಾಲಿನಲ್ಲಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಅಳಂದ ಕಟ್ಟಡ ಕಾಮಗಾರಿಗಾಗಿ ರೂ. 38.10 ಲಕ್ಷ ಬಿಡುಗಡೆ ಮಾಡಲಾಗಿತ್ತು.

ಶ್ರೀ ಸುಭಾಷ್ ಆರ್.ಗುತ್ತೇದಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಒಂದೇ ಒಂದು ಸ್ಪಷ್ಟೀಕರಣವನ್ನು ನಾನು ಕೇಳಬಯಸುತ್ತೇನೆ. 'ವಸತಿ ನಿಲಯಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು (ಪೂರ್ಣ ಮಾಹಿತಿ ನೀಡುವುದು) ಎಂಬ ನನ್ನ ಪ್ರಶ್ನೆಗೆ' ಒಂದು ವಿದ್ಯಾರ್ಥಿನಿಲಯದ ಕಟ್ಟಡ ಪೂರ್ಣಗೊಳ್ಳುವ ಹಂತದಲ್ಲಿದ್ದು ಇನ್ನೊಂದು ವಿದ್ಯಾರ್ಥಿನಿಲಯದ ಕಟ್ಟಡ ವಿವಾದದಿಂದಾಗಿ ಸದ್ಯಕ್ಕೆ ಸ್ಥಗಿತಗೊಂಡಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅಲ್ಲಿ ವಿವಾದ ಏನಿದೆ? 30–40 ವರ್ಷಗಳ ಹಿಂದೆ ಹಾಸ್ಟೆಲ್ ಬಿಲ್ಡಿಂಗ್‌ವೊಂದನ್ನು ಕಟ್ಟಲಾಗಿದೆ, ಆ compound wall ನಲ್ಲೇ ಈಗ ಮತ್ತೊಂದು ಹಾಸ್ಟೆಲ್ ಕಟ್ಟಲಾಗುತ್ತಿದೆ. ಇದರಲ್ಲಿ ಏಕೆ ವಿವಾದ ಬರುತ್ತದೆ? ಹೊರಗಿನವರು ಕೆಲವರು ಬೇಕಂತಲೇ ಇದನ್ನೊಂದು ವಿವಾದವನ್ನಾಗಿ ಮಾಡುತ್ತಿದ್ದಾರೆ. ಹಳೆಯ ಹಾಸ್ಟೆಲ್‌ನ ಕೌಂಪೌಂಡ್ ಒಳಗಡೆಯೇ ಈ ಹೊಸ ಹಾಸ್ಟೆಲ್ ಬರುತ್ತಿದೆ. ಆದರೂ ಸಹ ಇದನ್ನು ವಿವಾದ ಮಾಡುತ್ತಿದ್ದಾರೆ. ವಿವಾದ ಇದೆ ಎಂದು ಹಾಸ್ಟೆಲ್ ಕಟ್ಟಡ ನಿರ್ಮಾಣ ಸ್ಥಗಿತಗೊಂಡಿದೆ. ದಯವಿಟ್ಟು ಸ್ಥಗಿತಗೊಂಡಿರುವ ನಿರ್ಮಾಣ ಕಾರ್ಯವನ್ನು ಪುನಃ ಪ್ರಾರಂಭಿಸಿ ಮುಗಿಸಿಕೊಡಬೇಕೆಂದು ಕೋರುತ್ತೇನೆ.

O.31 F-29

ಶ್ರೀ ಡಿ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನೊಂದು ಪ್ರಶ್ನೆಯನ್ನು ಪ್ರಸ್ತಾಪಿಸಿದ್ದಾರೋ, ಆ ಬಗ್ಗೆ ಪರಿಶೀಲನೆ ಮಾಡಿ, ಬರತಕ್ಕಂಥ ಆರ್ಥಿಕ ವರ್ಷದಲ್ಲಿ ಆ ವಿವಾದವನ್ನು ಬಗೆಹರಿಸಿ, ಅಲ್ಲಿ ಹಾಸ್ಟೆಲ್ ಕಟ್ಟಡ ನಿರ್ಮಾಣ ಕಾರ್ಯ ಪೂರ್ಣಗೊಳಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಸುಭಾಷ್ ಆರ್. ಗುತ್ತೇದಾರ್ : ನಮ್ಮಲಿ ಒಂದೇ ಕಡೆಯಲ್ಲಿ ಎಲ್ಲಾ ಆಫೀಸ್‌ಗಳಿವೆ. Power of Attorney ತೆಗೆದುಕೊಂಡು Private ನವರು ಅದನ್ನು 'ನಮ್ಮದು' ಎಂದು ಹೇಳಿಕೊಳ್ಳುತ್ತಿದ್ದಾರೆ. ಅಲ್ಲಿ ಏನೂ ಕೆಲಸ ಮಾಡಲು ಬಿಡುತ್ತಿಲ್ಲ. ಒಂದು quarters ಗೆ ಮತ್ತು ಇನ್ನೊಂದು quarters ಗೂ ಮಧ್ಯದಲ್ಲಿ ಖಾಲಿ ಇದ್ದ ಜಾಗದಲ್ಲಿ ಸಹಿತ private ನವರು building ಕಟ್ಟಿದ್ದಾರೆ ಅಲ್ಲಿ ಎಲ್ಲಾ ಆಫೀಸ್‌ಗಳಿವೆ. ಅಲ್ಲಿ education department office ಇದೆ, veterinary department office ಇದೆ. Horticulture, Taluk Panchayath Office, PWD Office ಎಲ್ಲವೂ ಸಹಿತ ಅಲ್ಲೇ ಇದೆ. ಇವೆಲ್ಲದರ ಮಧ್ಯೆದಲ್ಲಿ private ನವರು occupy ಮಾಡುತ್ತಿದ್ದಾರೆ. ದಯವಿಟ್ಟು ಈ ಬಗ್ಗೆ ಪರಿಶೀಲನೆ ಮಾಡಿಕೊಂಡು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ. ಅದನ್ನು ಪರಿಶೀಲನೆ ಮಾಡಿ, ಬರತಕ್ಕಂಥ ಆರ್ಥಿಕ ವರ್ಷದಲ್ಲಿ ಅದನ್ನು ಮಾಡಿಸಿಕೊಡುತ್ತೇನೆ.

ಬೀದರ್ ನಗರ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ

113 (1492) ಶ್ರೀ ರಹೀಮ ಖಾನ (ಬೀದರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ನಗರದಲ್ಲಿ ಸುಮಾರು 20 ವರ್ಷಗಳ ಹಿಂದೆ 10 ಹಾಸಿಗೆಯ ಪ್ರಸೂತಿ ಆಸ್ಪತ್ರೆ ಪ್ರಾರಂಭಿಸಿರುವುದು ಸರ್ಕಾರದ ಗಮನದಲ್ಲಿಯೇ;

ಬೀದರ್ ನಗರದಲ್ಲಿ ಜನಸಂಖ್ಯೆ ಹೆಚ್ಚಳವಾದರೂ ಇಲ್ಲಿಯವರೆಗೆ 10 ಹಾಸಿಗೆಯ ಇದ್ದು ಇದರಿಂದ ಈ ಭಾಗದ ಜನರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;